**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ ಜೇವರ್ಗಿ</u>**

**<u>ಸಿ.ಸಿ.ನಂಃ 161/2024</u>**

| | | |
|---|---|---|
| ಪಿರ್ಯಾರ್ದುದಾರಃ | 1. | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸರು |

**ವಿರುದ್ಧ**

| | | |
|---|---|---|
| ಆರೋಪಿ | : | ಶರಣಪ್ಪ ತಂದೆ ಚಂದ್ರಾಮಪ್ಪ ಗಂವಾರ,<br>ವಯಸ್ಸುಃ 34 ವರ್ಷ, ಉಃ ಒಕ್ಕಲುತನ<br>ವಾಸಃ ಬಿರಾಳ (ಬಿ) ಗ್ರಾಮ, ತಾಃ ಜೇವರ್ಗಿ,<br>ಜಿಃ ಕಲಬುರಗಿ. |

**<u>ದೋಷಾರೋಪಣೆ</u>**

ಶ್ರೀಮತಿ ತಯ್ಯಬಾ ಸುಲ್ತಾನಾ, ಬಿ.ಎ., ಎಲ್ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ನಾನು, ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆಃ

ದಿನಾಂಕ 13-10-2023 ರಂದು ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಬಿರಾಳ (ಬಿ) ಗ್ರಾಮ ಸೀಮಾಂತರದ ಮಲ್ಲಣ್ಣಗೌಡ ಇವರ ಹೊಲದ ಹತ್ತಿರ ಚಾಸಾ-1 ಮತ್ತು 4 ರವರು ಹೊಲದ ಪಕ್ಕದಲ್ಲಿರುವ ಹಳ್ಳದ ದಂಡೆಯಲ್ಲಿ ಆಡುಗಳನ್ನು ಮೇಯಿಸುತ್ತಿರುವಾಗ ಆರೋಪಿಯಾದ ನೀವು ಚಾಸಾ-1ರವರಿಗೆ ಏ ರಂಡಿ ನಾವು ಪಾಲಿಗೆ ಮಾಡಿದ ಹೊಲದಲ್ಲಿ ಯಾಕೆ ಆಡುಗಳನ್ನು ಬಿಟ್ಟಿದ್ದೀಯಾ ಸೂಳಿ, ಹೊಲಸು ರಂಡಿ, ಸೂಳಿ ನಿಮ್ಮೌನ ಎಂದು ಚಾಸಾ-4ರವರಿಗೆ ಏ ಸೂಳ್ಯಾ ಮಗನೇ ಬೋಸಡಿ ಮಗನೇ ಸೂಳೇ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿಂದಿಸಿ ಅವಮಾನವನ್ನುಂಟು ಮಾಡಿ ಚಾಸಾ-1ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ-1 ಮತ್ತು 4ರವರನ್ನು ಉದ್ರೇಕಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ, ಮೇಲೆ ತಿಳಿಸಿದ ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ಮತ್ತು 4ರವರೊಂದಿಗೆ ಮೇಲೆ ತಿಳಿಸಿದ ವಿಚಾರದ ಹಿನ್ನೆಲೆಯಲ್ಲಿ ಜಗಳ ತೆಗೆದು, ಆರೋಪಿಯಾದ ನೀವು ಬಾರುಕೋಲಿನಿಂದ ಚಾಸಾ-4ರವರಿಗೆ ಹಾಗೂ ಕಲ್ಲಿನಿಂದ ಚಾಸಾ-4ರವರ ತಲೆಗೆ ಹೊಡೆದು ಸಾಮಾನ್ಯ

ಸ್ವರೂಪದ ಗಾಯವನ್ನುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 324 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೇಯದಾಗಿ, ಮೇಲೆ ತಿಳಿಸಿದ ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ಮತ್ತು 4 ರವರೊಂದಿಗೆ ಮೇಲೆ ತಿಳಿಸಿದ ವಿಚಾರದ ಹಿನ್ನೆಲೆಯಲ್ಲಿ ಜಗಳ ತೆಗೆದು, ಆರೋಪಿಯಾದ ನೀವು ಚಾಸಾ-4ರವರ ಕಪಾಳಕ್ಕೆ ಬೆನ್ನಿಗೆ ಕೈಯಿಂದ ಹೊಡೆದು ಚಾಸಾ-4ರವರಿಗೆ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 323 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ನಾಲ್ಕನೇಯದಾಗಿ, ಮೇಲೆ ತಿಳಿಸಿದ ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ಮತ್ತು 4 ರವರೊಂದಿಗೆ ಮೇಲೆ ತಿಳಿಸಿದ ವಿಚಾರದ ಹಿನ್ನೆಲೆಯಲ್ಲಿ ಜಗಳ ತೆಗೆದು, ಆರೋಪಿಯಾದ ನೀವು ಚಾಸಾ-1ರವರ ಕೈ ಹಿಡಿದು ಜಗ್ಗಾಡಿ ನೆಲದ ಮೇಲೆ ನೂಕಿಸಿಕೊಟ್ಟು ಚಾಸಾ-1ರವರ ಹೆಣ್ಣುತನಕ್ಕೆ ಅಗೌರವ ತೋರಿಸಿ ಚಾಸಾ-1ರವರ ಮೇಲೆ ಅಪರಾಧಿಕ ಬಲಪ್ರಯೋಗವನ್ನುಂಟು ಮಾಡಿದ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 354 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ, ಮೇಲೆ ತಿಳಿಸಿದ ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ಮತ್ತು 4 ರವರೊಂದಿಗೆ ಮೇಲೆ ತಿಳಿಸಿದ ವಿಚಾರದ ಹಿನ್ನೆಲೆಯಲ್ಲಿ ಜಗಳ ತೆಗೆದು, ಚಾಸಾ-1 ಮತ್ತು 4ರವರಿಗೆ ನಿಮ್ಮಿಬ್ಬರಿಗೆ ಸಣ್ಣಾಗಿ ಕಡಿತಿನಿ ಅಂತಾ ಜೀವ ಬೆದರಿಕೆ ಹಾಕಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 506 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

(ಶ್ರೀಮತಿ ತಯ್ಯಬಾ ಸುಲ್ತಾನಾ)

ದಿಃ 25-11-2025

ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ ಜೇವರ್ಗಿ</u>**

**<u>ಸಿ.ಸಿ.ನಂಃ 161/2024</u>**

| | | |
|---|---|---|
| ಪಿರ್ಯಾದಿದಾರಃ | 1. | ಕರ್ನಾಟಕ ರಾಜ್ಯದ ಪರ ಜೇವರ್ಗಿ ಪೋಲಿಸರು |

**ವಿರುದ್ಧ**

| | | |
|---|---|---|
| ಆರೋಪಿ | : | ಶರಣಪ್ಪ ತಂದೆ ಚಂದ್ರಾಮಪ್ಪ ಗಂವಾರ,<br>ವಯಸ್ಸುಃ 34 ವರ್ಷ, ಉಃ ಒಕ್ಕಲುತನ<br>ವಾಸಃ ಬಿರಾಳ (ಬಿ) ಗ್ರಾಮ, ತಾಃ ಜೇವರ್ಗಿ,<br>ಜಿಃ ಕಲಬುರಗಿ. |

**<u>ದೋಷಾರೋಪಣೆ</u>**

ಪ್ರಶ್ನೆ.1:- ಮೇಲ್ಕಂಡ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?

ಆರೋಪಿಯ ಉತ್ತರ:-

ಪ್ರಶ್ನೆ.2:- ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರ:-

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿಯ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ಈ ದಿನ ದಿಃ 25-11-2025 ರಂದು ದೃಢೀಕರಿಸುತ್ತೇನೆ.

ಸ್ಥಳಃಜೇವರ್ಗಿ
ದಿಃ 25-11-2025

(ಶ್ರೀಮತಿ ತಯ್ಯಬಾ ಸುಲ್ತಾನಾ)
ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ